# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಜಿ.ಚಂದ್ರಪ್ಪ, ಹಿಂದಿನ ಉಪಕಾರ್ಯದರ್ಶಿ (ಪ್ರಸ್ತುತ ನಿವೃತ್ತ) ಇವರ ವಿರುದ್ಧದ ಇಲಾಖಾ ವಿಚಾರಣೆಯ- ಅಂತಿಮ ಆದೇಶ.

**ಓದಲಾಗಿದೆ:-** 1. ಸರ್ಕಾರದ ಸಮಸಂಖ್ಯೆಯ ಕಾರಣ ಕೇಳುವ ನೋಟಿಸು ದಿನಾಂಕ: 21.02.2014

2. ಶ್ರೀ ಜಿ.ಚಂದ್ರಪ್ಪ ಉಪಕಾರ್ಯದರ್ಶಿ, ಇವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ:07.04.2014 ಮತ್ತು 08.05.2015

****

**ಪ್ರಸ್ತಾವನೆ:**

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕು ವ್ಯಾಪ್ತಿಯಲ್ಲಿ 15 ಗ್ರಾಮ ಪಂಚಾಯತಿಗಳಲ್ಲಿ 2009-10 ಮತ್ತು 2010-11ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ತನಿಖೆಯನ್ನು ನಡೆಸಿ ವರದಿಯನ್ನು ನೀಡಲು ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನಲ್ಲಿ ಈ ಹಿಂದೆ ಯೋಜನಾ ನಿರ್ದೇಶಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಜಿ.ಚಂದ್ರಪ್ಪ, (ಪ್ರಸ್ತುತ ನಿವೃತ್ತ) ಇವರ ನೇತೃತ್ವದಲ್ಲಿ ರಚಿಸಲಾದ ತನಿಖಾ ತಂಡವು ದಿನಾಂಕ: 23.06.2011 ರಲ್ಲಿ ನೀಡಿದ್ದ ವರದಿಯಲ್ಲಿ ಕಾಮಗಾರಿ ಅನುಷ್ಠಾನದಲ್ಲಿನ ಆಡಳಿತಾತ್ಮಕ ದೋಷಗಳ ಬಗ್ಗೆ ಹಾಗೂ ಸರ್ಕಾರಕ್ಕೆ ತುಂಬಬೇಕಾದ ಮೊತ್ತವನ್ನು ಜಮಾ ಮಾಡದಿರುವ ಬಗ್ಗೆ ಮಾತ್ರ ನಮೂದಿಸಿ, ಸದರಿ ಕಾಮಗಾರಿಗಳಲ್ಲಿ ಆಗಿರುವ ಹಣದುರುಪಯೋಗದ ಬಗ್ಗೆ ಯಾವುದೇ ಮಾಹಿತಿ/ವರದಿಯನ್ನು ನೀಡದೇ ಇರುವುದನ್ನು ಒಂಬಡ್ಸ್‌ಮನ್, ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಇವರು ದಿನಾಂಕ: 26.06.2013 ರಲ್ಲಿ ನೀಡಿದ ವರದಿಯಲ್ಲಿ ಗಮನಿಸಿ, ಸದರಿ ಲೋಪಕ್ಕಾಗಿ ಶ್ರೀ ಜಿ.ಚಂದ್ರಪ್ಪ, ಹಿಂದಿನ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ಉತ್ತರಕನ್ನಡ (ಪ್ರಸ್ತುತ ನಿವೃತ್ತ), ಇವರ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸಲು ಮಾಡಿದ್ದ ಶಿಫಾರಸ್ಸನ್ನಾಧರಿಸಿ, ಸದರಿ ನಿವೃತ್ತ ಅಧಿಕಾರಿಗೆ ಮೇಲೆ (1) ರಲ್ಲಿ ಓದಲಾದಂತೆ, ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಾವಳಿಗಳು-1957ರ ನಿಯಮ-12(1)(ಎ) ರ ಪ್ರಕಾರ ಕಾರಣ ಕೇಳುವ ನೋಟೀಸ್‌ನ್ನು ದಿನಾಂಕ:21.02.2014ರಂದು ಜಾರಿಮಾಡಲಾಗಿರುತ್ತದೆ. ಸದರಿ ನೋಟೀಸ್‌ಗೆ ಅಧಿಕಾರಿಯು ಮೇಲೆ (2) ರಲ್ಲಿ ಓದಲಾದಂತೆ ನೀಡಿರುವ ಉತ್ತರಗಳಲ್ಲಿ ತಮಗೆ ಜಾರಿಮಾಡಿರುವ ಕಾರಣ ಕೇಳುವ ನೋಟೀಸ್‌ನಲ್ಲಿ ತಿಳಿಸಿರುವ 6 ಕಾಮಗಾರಿಗಳ ಪೈಕಿ ಕ್ರ.ಸಂ.01, 5 ಮತ್ತು 6 ರಲ್ಲಿನ ಕಾಮಗಾರಿಗಳು 2008-09 ಮತ್ತು 2011-12 ಹಾಗೂ 2012-13 ನೇ ಸಾಲುಗಳಿಗೆ ಸೇರಿದ ಕಾಮಗಾರಿಗಳಾಗಿರುತ್ತವೆಂದು ತಿಳಿಸುತ್ತಾ, ತಮಗೆ ತನಿಖೆ ಮಾಡಲುವಹಿಸಿದ್ದ ಕಾಮಗಾರಿಯ ಅವಧಿಯು 2009-10, 2010-11 ನೇ ಸಾಲುಗಳದ್ದಾಗಿರುತ್ತದೆಂದು ಹಾಗೂ ಕ್ರಮ ಸಂಖ್ಯೆ:2, 3 ಮತ್ತು 4ರಲ್ಲಿನ ಕಾಮಗಾರಿಗಳ ದೋಷಾರೋಪಣೆಗಳಿಗೆ ಸಂಬಂಧಿಸಿದಂತೆ, ಸದರಿ ಕಾಮಗಾರಿಗಳಲ್ಲಿ ಆಗಿರುವ ಲೋಪದೋಷಗಳು ಆಡಳಿತಾತ್ಮಕ ದೋಷಗಳಾಗಿರುತ್ತವೆ ಎಂದು ತಿಳಿಸುತ್ತಾ, ತಮ್ಮ ವಿರುದ್ಧ ಶಿಸ್ತುಕ್ರಮವನ್ನು ಕೈಬಿಡುವಂತೆ ಕೋರಿರುತ್ತಾರೆ.

ಶ್ರೀ ಜಿ.ಚಂದ್ರಪ್ಪ, ಇವರ ನೀಡಿರುವ ಉತ್ತರವನ್ನು ಹಾಗೂ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಲಭ್ಯವಿರುವ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಇಲಾಖಾ ವಿಚಾರಣೆಯಲ್ಲಿ ಸದರಿ ಅಧಿಕಾರಿಯು ಈಗಾಗಲೇ ದಿನಾಂಕ:31.01.2015 ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 12(1)(ಎ) ರನ್ವಯ ನೀಡಿರುವ ಕಾರಣ ಕೇಳುವ ನೋಟಿಸನ್ನಾಧರಿಸಿ, ನಿವೃತ್ತಿ ಅಧಿಕಾರಿಗೆ ದಂಡನೆಯನ್ನು ವಿಧಿಸಲು ನಿಯಮಗಳಲ್ಲಿ ಅವಕಾಶವಿಲ್ಲದೆ ಇರುವುದರಿಂದ, ಹಾಗೂ ಘಟನೆಯು ನಡೆದು ಈಗಾಗಲೇ 4 ವರ್ಷಗಳು ಗತಿಸಿರುವುದರಿಂದ, ಸದರಿ ಅಧಿಕಾರಿಯ ಲೋಪಗಳ ಸಂಬಂಧ ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(ii) ರನ್ವಯ ಇಲಾಖಾ ವಿಚಾರಣೆ ಜರುಗಿಸಲು ಅವಕಾಶವಿಲ್ಲದೆ ಇರುವುದರಿಂದ, ಇವರನ್ನು ಅವರ ವಿರುದ್ಧ ಮಾಡಿರುವ ಆರೋಪಗಳಿಂದ ದೋಷಮುಕ್ತಗೊಳಿಸುವುದು ಅನಿವಾರ್ಯವಾಗಿರುವುದನ್ನು ಗಮನಿಸಿ, ಸದರಿ ಅಧಿಕಾರಿಯನ್ನು ಆರೋಪಗಳಿಂದ ದೋಷಮುಕ್ತಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 417 ಪಬವ 2013 ಬೆಂಗಳೂರು ದಿನಾಂಕ: 30-01-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಶ್ರೀ ಜಿ.ಚಂದ್ರಪ್ಪ, ಹಿಂದಿನ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ಉತ್ತರ ಕನ್ನಡ (ಪ್ರಸ್ತುತ ನಿವೃತ್ತ) ಇವರನ್ನು ದಿನಾಂಕ: 21.02.2014 ರಂದು ಜಾರಿ ಮಾಡಿರುವ ದೋಷಾರೋಪಣ ಪಟ್ಟಿಯಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

30/01/2017
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ &ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

30/1/17 o/c

ಇವರಿಗೆ,

1) ಮಹಾಲೇಖಪಾಲರು(ಜಿ&ಎಸ್ಎಸ್ಎ)/(ಇ&ಆರ್ಎಸ್ಎ)/(ಎ&ಇ) ರವರ ಕಾರ್ಯದರ್ಶಿ, ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-01
2) ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ
4) ಸಂಬಂಧಿಸಿದ ಅಧಿಕಾರಿಗೆ

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.